


ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ

ಮಹಾತ್ಮ ಗಾಂಧಿ ರಸ್ತೆ, ಮೈಸೂರು – 570004

## ಕಾಕ್ಲಿಯರ್ ಇಂಪ್ಲಾಂಟ್‌ನಲ್ಲಿ ಉಂಟಾಗುವ ಸಮಸ್ಯೆಗಳು ಮತ್ತು ನಿವಾರಣೆ ಮಾಡುವ ವಿಧಾನ

"ಉತ್ತಮ ಶ್ರವಣ,
ಉತ್ತಮ ಜೀವನ."



**ಸಂಪರ್ಕಿಸಿ**

ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ ,
ಎಂ.ಜಿ. ರಸ್ತೆ, ಮೈಸೂರು – 570004

@ jssish@jssonline.org /
jssishmys@rediffmail.com

0821-2548229, 0821-2335014

## ಕಾಕ್ಲಿಯರ್ ಇಂಪ್ಲಾಂಟ್‌ನಲ್ಲಿ ಉಂಟಾಗುವ ಸಮಸ್ಯೆಗಳು ಮತ್ತು ನಿವಾರಣೆ ಮಾಡುವ ವಿಧಾನ

| ಉಂಟಾಗುವ ಸಮಸ್ಯೆಗಳು | ದೋಷ ನಿವಾರಣೆ ಹಂತಗಳು |
|---|---|
| ಮಾತಿನ ಸ್ಪಷ್ಟತೆ / ಧ್ವನಿ ಗುಣಮಟ್ಟದಲ್ಲಿ ಕಳಪೆ ಅಥವಾ ಬದಲಾವಣೆ ಉಂಟಾದರೆ ಏನು ಮಾಡಬೇಕು? | 1. ಎಲ್ಲಾ ಕಾಂಟ್ಯಾಕ್ಟ್ ಪಾಯಿಂಟ್ ಗಳನ್ನು ಪರಿಶೀಲಿಸಿ.<br>2. ಯಾವುದೇ ಹಾನಿ ಅಥವಾ ಬಿರುಕುಗಳಿದ್ದರೆ ಪರೀಕ್ಷಿಸಿ.<br>3. ಮೈಕ್ ಪೋರ್ಟ್‌ಗಳನ್ನು ನೋಡಿ ಮತ್ತು ಅಗತ್ಯವಿದ್ದರೆ ಮೈಕ್ ಕವರ್‌ಗಳನ್ನು ಬದಲಾಯಿಸಿ.<br>4. ಟಿ-ಕಾಯಿಲ್ (ಟೆಲಿ-ಕಾಯಿಲ್) ಆನ್ ಆಗಿದೆಯೇ ಎಂದು ಪರಿಶೀಲಿಸಿ. |
| ಸೌಂಡ್ ಪ್ರೊಸೆಸರ್ ನಿಂದ ಯಾವುದೇ ಧ್ವನಿ/ಶಬ್ದ ಬರುತ್ತಿಲ್ಲವೆಂದರೆ ಏನು ಮಾಡಬೇಕು? | 1. ಪ್ರೊಸೆಸರ್ ಆನ್ ಮಾಡಲು ಪ್ರಯತ್ನಿಸಿ.<br>2. ಬ್ಯಾಟರಿಗಳನ್ನು ಬದಲಾಯಿಸಿ.<br>3. ಸೂಕ್ಷ್ಮತೆ ಮತ್ತು ವಾಲ್ಯೂಮ್ ಸೆಟ್ಟಿಂಗ್‌ಗಳು ಸೂಕ್ತವಾಗಿವೆಯೇ ಎಂದು ನೋಡಿ.<br>4. ಕಾಯಿಲ್/ಕೇಬಲ್/ಪ್ರೊಸೆಸರ್‌ನಲ್ಲಿ ಬಿರುಕುಗಳಿದೆಯೇ ಎಂದು ಪರಿಶೀಲಿಸಿ.<br>5. ಪ್ರೊಸೆಸರ್‌ನಲ್ಲಿರುವ ಮೈಕ್ರೊಫೋನ್ ಅನ್ನು ಪರೀಕ್ಷಿಸಿ (ಪೋರ್ಟ್‌ಗಳು ಮುಚ್ಚಿಹೋಗಿರಬಹುದು ಅಥವಾ ಕೊಳಕಾಗಿರಬಹುದು) ಸ್ವಚ್ಛಗೊಳಿಸಿ.<br>6. ಸಮಸ್ಯೆ ಮುಂದುವರಿದರೆ ನಿಮ್ಮ ಶ್ರವಣ ತಜ್ಞರನ್ನು ಸಂಪರ್ಕಿಸಿ. |

## ಕಾಕ್ಲಿಯರ್ ಇಂಪ್ಲಾಂಟ್‌ನಲ್ಲಿ ಉಂಟಾಗುವ ಸಮಸ್ಯೆಗಳು ಮತ್ತು ನಿವಾರಣೆ ಮಾಡುವ ವಿಧಾನ

| ಉಂಟಾಗುವ ಸಮಸ್ಯೆಗಳು | ದೋಷ ನಿವಾರಣೆ ಹಂತಗಳು |
|---|---|
| ಪ್ರೊಸೆಸರ್ ನಿಂದ ಬಿಟ್ಟು ಬಿಟ್ಟು ಶಬ್ದ ಬರುತ್ತಿದೆ ಎಂದರೆ ಏನು ಮಾಡಬೇಕು? | 1. ಕಾಯಿಲ್ ಮತ್ತು ಕಾಯಿಲ್ ಕೇಬಲ್ ಮತ್ತು ಪ್ರೊಸೆಸರ್ ಸಂಪರ್ಕಗಳಲ್ಲಿ ಬಿರುಕುಗಳಿದೆಯೇ ಎಂದು ಪರೀಕ್ಷಿಸಿ.<br>2. ಯಾವುದೇ ಸಡಿಲ ಸಂಪರ್ಕಗಳಿದ್ದರೆ ಪರಿಶೀಲಿಸಿ ಮತ್ತು ಸರಿಪಡಿಸಿ.<br>3. ಬ್ಯಾಟರಿಯಲ್ಲಿ ಸಮಸ್ಯೆ ಇದೆಯೇ ಎಂದು ನೋಡಿ.<br>4. ಪ್ರೋಗ್ರಾಂಗಳನ್ನು ಬದಲಾಯಿಸಿ.<br>5. ಸಮಸ್ಯೆ ಮುಂದುವರಿದರೆ, ಶ್ರವಣ ತಜ್ಞರನ್ನು ಬೇಟಿ ಮಾಡಿ. |
| ಪ್ರೊಸೆಸರ್ ಇದ್ದಕ್ಕಿದ್ದಂತೆ ಆಫ್ ಆಗುತ್ತದೆಯೇ? | 1. "ಆಟೋ ಪವರ್ ಆಫ್" ಆನ್ ಆಗಿದೆಯೇ ಇಲ್ಲವೇ ಎಂದು ಪರಿಶೀಲಿಸಿ.<br>2. ಬ್ಯಾಟರಿಗಳನ್ನು ಬದಲಾಯಿಸಿ. |
| ಪ್ರೊಸೆಸರ್ ಒದ್ದೆಯಾದರೆ ಏನು ಮಾಡಬೇಕು? | 1. ಮೃದುವಾದ ಒಣ ಬಟ್ಟೆಯಿಂದ ಪ್ರೊಸೆಸರ್ ರನ್ನು ಚೆನ್ನಾಗಿ ಒರೆಸಿ.<br>2. ನಿಮ್ಮ ಪ್ರೊಸೆಸರ್ ಅನ್ನು ಡ್ರೈ ಏಡ್ ಕಿಟ್ ನಲ್ಲಿ 10-12 ಗಂಟೆಗಳ ಕಾಲ ಇಟ್ಟು ನಂತರ ಬಳಸಿ. |

### ಸೇವೆ ಮತ್ತು ಅನುಸರಣೆ

- ವಾರ್ಷಿಕ ತಪಾಸಣೆಗಳನ್ನು ಮಾಡಿಸಿ.
- ವೈಯಕ್ತಿಕ ನಿರ್ವಹಣಾ ಪುಸ್ತಕವನ್ನು ಇಟ್ಟುಕೊಳ್ಳಿ.
- ದೋಷ-ನಿವಾರಣೆಯ ಹೊರತಾಗಿಯೂ ಸಮಸ್ಯೆಗಳು ಮುಂದುವರಿದರೆ ಶ್ರವಣ ತಜ್ಞರನ್ನು ಭೇಟಿ ಮಾಡಿ.